ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್ ನಂ:08192-259997
ಇ-ಮೇಲ್ ಐಡಿ:aeersddvg@gmail.com
ಸಂಖ್ಯೆ: ಸ.ಕಾ.ನಿಇಂ(ವಿ)/ಸಲೆಅ/ಹಿಸ/ಕ-
ಲಗತು 5295-97

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),
ರವರ ಕಛೇರಿ
ಗ್ರಾಮೀಣ ಉಪ ವಿಭಾಗ, ಬೆವಿಕಂ., ದಾವಣಗೆರೆ.

4 DEC 2025

ಗೆ,

ಕಾರ್ಯ ನಿರ್ವಾಹಕ ಇಂಜನಿಯರ್(ವಿ),
ಕಾರ್ಯ ಮತ್ತು ಪಾಲನಾ ವಿಭಾಗ ಕಛೇರಿ.
ಬೆವಿಕಂ, ದಾವಣಗೆರೆ,

ಮಾನ್ಯರೇ,

ವಿಷಯ:- HT ಜಕಾತಿ ಯಿಂದ LT5 ಜಕಾತಿಗೆ ಮಾರ್ಪಡಿಸಿ (Conversion) TRM ತಂತ್ರಾಂಶದಲ್ಲಿ ಜಕಾತಿ ಬದಲಾವಣೆಗೆ ಅವಕಾಶ ಕಲ್ಪಿಸುವ ಬಗ್ಗೆ.

ಉಲ್ಲೇಖ:-1) ಗ್ರಾಹಕರ ಮನವಿ ಪತ್ರ ದಿನಾಂಕ:14.07.2025
2) ಗ್ರಾಹಕರ ಮನವಿ ಪತ್ರ ದಿನಾಂಕ:29.09.2025
3) ಗ್ರಾಹಕರ ಮನವಿ ಪತ್ರ ದಿನಾಂಕ: 10.09.2025.
4) ಹೆಚ್‌ಟಿ ರೇಟಿಂಗ್ ವರಧಿಯ ಪತ್ರ ಸಂಖ್ಯೆ:ಸ.ಕಾ.ನಿ.ಇಂ(ವಿ)/ಹೆಚ್.ಟಿ.ಆರ್/ದಾ/2025-26/482-85. ದಿ:24/10/2025
5) ಹೆಚ್‌ಟಿ ರೇಟಿಂಗ್ ವರಧಿಯ ಪತ್ರ ಸಂಖ್ಯೆ:ಸ.ಕಾ.ನಿ.ಇಂ(ವಿ)/ಹೆಚ್.ಟಿ.ಆರ್/ದಾ/2025-26/04 ದಿ:11/11/2025
6) ಹೆಚ್‌ಟಿ ರೇಟಿಂಗ್ ವರಧಿಯ ಪತ್ರ ಸಂಖ್ಯೆ:ಸ.ಕಾ.ನಿ.ಇಂ(ವಿ)/ಹೆಚ್.ಟಿ.ಆರ್/ದಾ/2025-26/446.ದಿ:06/10/2025
7) ತಮ್ಮ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:-EE/AEE(E)/AE-2/F-66/10508-10, ದಿ:25.09.2025
8) ತಮ್ಮ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:-AEE/AE(T)/RSD/DVG/256-26. ದಿ:11.09.2025
9) ತಮ್ಮ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:- EE/AEE(E)/AE-2/F-66/10712-14. ದಿ:03.10.2025

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ. ಗ್ರಾಮೀಣ ಉಪವಿಬಾಗ, ಬೆವಿಕಂ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸ್ಥಾವರಗಳನ್ನು ಉಲ್ಲೇಖ ಪತ್ರ-1 ರಿಂದ 3 ರವರೆಗೆ ಗ್ರಾಹಕರು ತಾವುಗಳು ಉಪಯೋಗಿಸಿರುವ HT ಜಕಾತಿಯಲ್ಲಿ ಸಂಪರ್ಕ ಪಡೆದ ಸ್ಥಾವರಗಳನ್ನು HT ಜಕಾತಿ ಯಿಂದ ಮಾರ್ಪಡಿಸಿ LT5 ಜಕಾತಿಗೆ ಬದಲಾಯಿಸಲು ಉಪವಿಭಾಗಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

| ಕ್ರ. ಸಂ | ಸ್ಥಾವರ ಸಂಖ್ಯೆ | ಹಾಲಿಇರುವ ಜಕಾತಿ | ಬದಲಾಗಬೇಕಾದ ಜಕಾತಿ | ಹಾಲಿ ಇರುವ ವಿದ್ಯುತ್‌ಸಂಪರ್ಕ ಪ್ರಮಾಣ | ಬದಲಾವಣೆಗಾಗಿ ಕೋರಿರುವ ಸಂಪರ್ಕ ಪ್ರಮಾಣ | ಅಧಿಕೃತ ಜ್ಞಾಪನಾ ಪತ್ರ |
|---|---|---|---|---|---|---|
| 1 | HTRSD77 | HT2(a) | LT5 | 170KVA | 170HP | EE/DVG/AE-2/F66/10508-10/D:25-09-2025 |
| 2 | HTRSD70 | HT2(b) | LT5 | 150KVA | 100HP | AEE(e)/AE(T)/RSD/DVG/25-26/3194-95/D:11-09-2025 |
| 3 | HTRSD46 | HT2(a) | LT5 | 160KVA | 160HP | EE/DVG/AE-2/F66/10712-14/D:30-10-2025 |

Scanned with OKEN Scanner

ಗ್ರಾಹಕರ ಮನವಿಯ ಮೇರೆಗೆಮೇಲಿನ ಉಲ್ಲೇಖ ಪತ್ರ-7 ರಿಂದ 9ರವರೆಗೆ HT Rating ಉಪವಿಭಾಗದ ವರದಿಯ ಆಧಾರದ ಮೇಲೆ ಉಪವಿಭಾಗ/ವಿಭಾಗ ಕಛೇರಿಯಿಂದ LT5 ಜಕಾತಿಯಲ್ಲಿ ಬಿಲ್ ವಿತರಿಸಲು ಅಧಿಕೃತ ಜ್ಞಾಪನಾ ಪತ್ರವನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ತಾಂತ್ರಿಕ ಶಾಖೆಯಿಂದ ಕಂದಾಯ ಶಾಖೆಗೆ HT ಯಿಂದ LT5 ಜಕಾತಿಗೆ ಬದಲಾವಣೆ ಮಾಡಿದ RR ಕಡತವನ್ನು ಸಲ್ಲಿಸಿರುತ್ತಾರೆ.

TRM ತಂತ್ರಾಂಶದಲ್ಲಿ HT ಯಿಂದ LT-5 ಜಕಾತಿಗೆ ಬದಲಾವಣೆಗೆ ಅವಕಾಶ ಕಲ್ಪಿಸಿರುವುದಿಲ್ಲ. ಆದ್ದರಿಂದ ಕಂದಾಯ ಶಾಖೆಯಿಂದ Idea Infinity IT Solution (PVT) LTD ರವರಿಗೆ ಸರಿಪಡಿಸಲು ಕಂದಾಯ ಶಾಖೆಯಿಂದ ಟಿಕೆಟ್ ಸಂಖ್ಯೆ 1) BTRM112518338, ದಿನಾಂಕ:19-11-2025 ಮತ್ತು 2). BTRM112518920 ದಿನಾಂಕ:29-11-2025 ರಂದು ಟಿಕೆಟ್ ದಾಖಲಿಸಿದ್ದು ಅದರಂತೆ Idea Infinity IT Solution (PVT) LTD ರವರ Dear Sir/Madam HT2 TO LT5 Tariff Change Not possible Regards Support Team ಎಂದು ಷರಾ ಬರೆದು ಟಿಕೆಟ್‌ನ್ನು ಮುಕ್ತಾಯಗೊಳಿಸಿರುತ್ತಾರೆ. ಅದರಂತೆ Support Team Idea Infinity IT Solution (PVT) LTD ರವರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿದಾಗ HT ಯಿಂದ LT-5 ಜಕಾತಿಗೆ ಅವಕಾಶ ಕಲ್ಪಿಸಿರುವುದಿಲ್ಲ ಎಂಬ ಮಾಹಿತಿಯನ್ನು ತಿಳಿಸಿರುತ್ತಾರೆ.

ಮುಂದುವರೆದು TRM ತಂತ್ರಾಂಶದಲ್ಲಿ HT ಯಿಂದ LT5 ಜಕಾತಿಗೆ ಮಾರ್ಪಡಿಸಲು((**Conversion**) ಅವಕಾಶ ಇಲ್ಲದೇ ಇರುವುದರಿಂದ ಗ್ರಾಹಕರಿಗೆ ಮಾಸಿಕ ವಿದ್ಯುತ್ ಬಿಲ್ ವಿತರಿಸಲು ತೊಂದರೆ ಉಂಟಾಗಿರುತ್ತದೆ ಎಂಬ ಮಾಹಿತಿಯನ್ನು ಈ ಪತ್ರದ ಮೂಲಕ ತಮ್ಮಲ್ಲಿ ತಿಳಿಯಪಡಿಸುತ್ತಾ ತುರ್ತಾಗಿ TRM ತಂತ್ರಾಂಶದಲ್ಲಿ HT ಯಿಂದ LT5 ಜಕಾತಿಗೆ ಮಾರ್ಪಡಿಸಲು ಅವಕಾಶ ಕಲ್ಪಿಸಿ ಕೊಡಬೇಕೆಂದು ಈ ಪತ್ರ ಮೂಲಕ ತಮ್ಮಲ್ಲಿ ಕೋರುತ್ತಾ ಹಾಗೂ ಈ ವಿಷಯದ ಬಗ್ಗೆ ಉಪವಿಭಾಗಕ್ಕೆ ಸೂಕ್ತ ನಿರ್ದೇಶನ ನೀಡಲು ತಮ್ಮಲ್ಲಿ ಗೌರವಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),
ಗ್ರಾಮೀಣ ಉಪವಿಭಾಗ, ಬೆವಿಕಂ, ದಾವಣಗೆರೆ.

ಪ್ರತಿ:-
ಸಂಬಂಧಪಟ್ಟ ವಿಷಯ ನಿರ್ವಾಹಕರು/ಕಛೇರಿ/ಹಿಸ/ಮುಖ್ಯ ಕಡತ

Scanned with OKEN Scanner